ಇ) ಹೌದು. ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಕನ್ನಡ ಜಾಗೃತಿ ಸಮಿತಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಕನ್ನಡ ಜಾಗೃತಿ ಸಮಿತಿಗಳನ್ನು ರಚಿಸಲು ಉದ್ದೇಶಿಸಿದೆ.

ಈ) ಇದು ಇನ್ನೂ ಪರಿಶೀಲನೆ ಹಂತದಲ್ಲಿದೆ.

ರಾಜ್ಯಕ್ಕೆ ನಬಾರ್ಡ್ ಯೋಜನೆಯಿಂದ ಮಂಜೂರಾಗಿರುವ ರಸ್ತೆ ಮತ್ತು ಸೇತುವೆ ಬಗ್ಗೆ ಪಟ್ಟಿ

1684 - ಶ್ರೀ ಬಿ. ಶಿವರಾಮ್ (ಗಂಡಸಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಸ್ತೆ ಮತ್ತು ಸೇತುವೆ ಅಭಿವೃದ್ಧಿಗೆ ನಬಾರ್ಡ್ ಯೋಜನೆಯಿಂದ ಮಂಜೂರಾತಿಯಾಗಿರುವ ಹಣವೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಹಾಸನ ಜಿಲ್ಲೆಗೆ ಒದಗಿಸಿರುವ ಹಣವೆಷ್ಟು? ಕ್ಷೇತ್ರವಾರು ರಸ್ತೆ ಕಿ.ಮೀ ಮತ್ತು ಹಣದ ಮಾಹಿತಿ ಒದಗಿಸುವುದು? (ತಾಲ್ಲೂಕು ಮಾಹಿತಿ ಲಭ್ಯವಿರುತ್ತದೆ)

ಇ) ನಬಾರ್ಡ್ ಯೋಜನೆಯ ರಸ್ತೆ ಮತ್ತು ಸೇತುವೆಗಳ ಆಯ್ಕೆಗೆ ಅನುಸರಿಸುವ ಮಾರ್ಗ ಸೂಚಿಗಳೇನೇನು?

ಈ) ಮಾರ್ಗಸೂಚಿ ಅನುಸರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ಪಡೆದಿರುವ ರಸ್ತೆಗಳ ಪಟ್ಟಿ ಮತ್ತು ಮಂಜೂರಾತಿ ಅಂದಾಜನ್ನು ಜಿಲ್ಲೆಯಿಂದ ಏರಿಸಿರುವ ಪಟ್ಟಿಯ ಹಣದ ಮಾಹಿತಿ ಕ್ಷೇತ್ರವಾರು (ಠಿ ಕ್ಷೇತ್ರ) ಮಾಹಿತಿ ಒದಗಿಸುವುದು ತಾಲ್ಲೂಕುವಾರು ಲಭ್ಯವಿರುತ್ತದೆಯೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮಂಜೂರಾತಿಯಾಗಿರುವ ಹಣದ ಮೊತ್ತ 163 ಕೋಟಿ ರೂ.ಗಳು ಇದರಲ್ಲಿ ನಬಾರ್ಡ್ ಸಾಲದ ಮೊತ್ತ 122 ಕೋಟಿ ರೂ.ಗಳು

ಜಿಲ್ಲಾವಾರು ಒಪ್ಪಿತವಾದ ಕಾಮಗಾರಿಗಳ ಮೊತ್ತ
(ಲಕ್ಷ ರೂ.ಗಳಲ್ಲಿ)

1)	ಬೆಂಗಳೂರು	-	736.16
2)	ಕೋಲಾರ	-	781.79
3)	ತುಮಕೂರು	-	511.25

4)	ಚಿತ್ರದುರ್ಗ	-	859.34
5)	ಶಿವಮೊಗ್ಗ	-	729.19
6)	ಮೈಸೂರು	-	1007.16
7)	ಮಂಡ್ಯ	-	769.12
8)	ಹಾಸನ	-	1182.00
9)	ಚಿಕ್ಕಮಗಳೂರು	-	381.33
10)	ದ.ಕನ್ನಡ	-	508.77
11)	ಕೊಡಗು	-	728.63
12)	ಬೆಳಗಾಂ	-	840.04
13)	ಬಿಜಾಪುರ	-	741.98
14)	ಧಾರವಾಡ	-	1150.69
15)	ಉ. ಕನ್ನಡ	-	332.45
16)	ಗುಲ್ಬರ್ಗಾ	-	422.61
17)	ರಾಯಚೂರು	-	963.85
18)	ಬೀದರ್	-	295.00
19)	ಬಳ್ಳಾರಿ	-	490.34

ಅ) ಹಾಸನ ಜಿಲ್ಲೆಗೆ ಒದಗಿಸಿದ ಹಣ 11.82 ಕೋಟಿ ರೂ., ಕ್ಷೇತ್ರವಾರು ವಿವರ ಲಗತ್ತಿಸಿದೆ. ಅನುಬಂಧ -ಅ

ಇ) ಪ್ರಸ್ತಾವಿತ ಕಾಮಗಾರಿಗಳು ಗ್ರಾಮೀಣಾಭಿವೃದ್ಧಿಯ ಹಿನ್ನೆಲೆ ಇರಬೇಕು.

ಈ) ಆಡಳಿತ ಅನುಮೋದನೆ ನೀಡಲಾಗಿರುವ ಕಾಮಗಾರಿಗಳ ಪಟ್ಟಿ ಲಗತ್ತಿಸಿದೆ. ಒಂದು ಕಾಮಗಾರಿಗೆ ಆಡಳಿತ ಅನುಮೋದನೆ ನೀಡಲಾಗುತ್ತಿದೆ.

ಖಾಸಗಿ ಮೀನು ಮರಿ ಉತ್ಪಾದನಾ ಪಾಲನಾ ಕೇಂದ್ರಗಳು

1686 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ಮೀನುಮರಿ ಉತ್ಪಾದನಾ ಪಾಲನಾ ಕೇಂದ್ರಗಳಿಂದ ಮೀನು ಮರಿಗಳನ್ನು ಜಲಾಶಯಕ್ಕೆ ದಾಸ್ತಾನು ಮಾಡಲು ಖರೀದಿಸುವ ವಿಧಾನವೇನು? (ವಿವರ ನೀಡುವುದು)